ರಾಜ್ಯದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ತನಿಖಾ ವರದಿ

2018(2540) ಶ್ರೀ ಗುರುಸ್ವಾಮಿ. ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ನಡೆದ ಅವ್ಯವಹಾರದ ಬಗ್ಗೆ ತನಿಖೆಗಾಗಿ ಸಿ.ಒ.ಡಿ.ಗೆ ಒಪ್ಪಿಸಿದ್ದು ನಿಜವೇ;

ಆ) ಹಾಗಿದ್ದಲ್ಲಿ, ತನಿಖಾ ವರದಿಯನ್ನು ಸಿ.ಒ.ಡಿ.ಯವರು ಸರ್ಕಾರಕ್ಕೆ ಸಲ್ಲಿಸಿದ ದಿನಾಂಕ ಯಾವುದು;

ಇ) ಸದರಿ ತನಿಖಾ ವರದಿಯಲ್ಲಿ ಸಿ.ಒ.ಡಿ.ಯವರು ತಪ್ಪಿತಸ್ಥರೆಂದು ಗುರುತಿಸಲಾದ ಅಧಿಕಾರಿಗಳು ಯಾರು ಯಾರು;

ಈ) ಸದರಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳು ಯಾವುವು;

ಉ) ಸದರಿ ತನಿಖಾ ವರದಿಯಲ್ಲಿ ಹಾಲಿ ನಿರ್ದೇಶಕರು ತಪ್ಪಿತಸ್ಥರೆಂದು ಗುರುತಿಸಲಾಗಿದ್ದರೂ ಸರ್ಕಾರ ಅವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದಿರಲು ಕಾರಣಗಳೇನು?

ಶ್ರೀ ಬಾಬುರಾವ್ ಚವ್ಹಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ರಾಜ್ಯ ಸಚಿವರು):

ಅ) ಹೌದು.

ಆ) 4.9.1998

ಇ) ಸಿ.ಒ.ಡಿ. ತನಿಖಾ ವರದಿಯು ಇಲಾಖೆಯ ಈ ಕೆಳಕಂಡ ಮುಖ್ಯ ಗ್ರಂಥಾಲಯ ಅಧಿಕಾರಿಗಳು ಕರ್ತವ್ಯಲೋಪ / ಅಕ್ರಮ ಎಸಗಲು ಕಾರಣರಾಗಿದ್ದಾರೆಂದು ವರದಿ ಮಾಡಿದೆ.

1. ಶ್ರೀ ಪಿ.ವೈ. ರಾಜೇಂದ್ರಕುಮಾರ್ 2. ಶ್ರೀ ಐ.ಸಿ. ಸಂಗಣ್ಣವರ್ (ನಿವೃತ್ತರು)
3. ಶ್ರೀ ಬಿ.ಬಿ. ಹೊಸಮನಿ (ನಿವೃತ್ತರು) 4. ಶ್ರೀ ಎಸ್.ಬಿ. ಹೊಂಡದಕೇರಿ
5. ಶ್ರೀ ಕೆ.ಜಿ. ವೆಂಕಟೇಶ್ 6. ಶ್ರೀಮತಿ ಕೌಸ್ತುಭಾ ರಾಘವನ್ (ಸ್ವಯಂ ನಿವೃತ್ತಿ)
7. ಶ್ರೀ ತಮ್ಮಯ್ಯ (ನಿವೃತ್ತ ನಿರ್ದೇಶಕರು) 8. ಶ್ರೀ ಎಸ್.ಎಂ. ಶಂಭು
9. ಶ್ರೀ ಆರ್. ಎಫ್. ದೇಸಾಯಿ 10. ಶ್ರೀ ಚಂದನಗೌಡರ್
11. ಶ್ರೀ ಎಫ್. ಎಸ್. ದುರುಗಣ್ಣವರ್ 12. ಶ್ರೀ ಟಿ. ಮಲ್ಲೇಶಪ್ಪ (ಈಗಿನ ನಿರ್ದೇಶಕರು)

ಈ) ಗ್ರಂಥಾಲಯ ಇಲಾಖೆಯ ಮುಖ್ಯ ಗ್ರಂಥಾಲಯಾಧಿಕಾರಿಗಳಿಗೆ ಶಿಕ್ಷಣ ಇಲಾಖೆ ಆರೋಪ ಪಟ್ಟಿ ಜಾರಿ ಮಾಡಿದೆ. ಇಲಾಖಾ ಮುಖ್ಯಸ್ಥರು ಹಾಗೂ ಜಂಟಿ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ತನಿಖಾ ವರದಿಯನ್ನು ಸಿ.ಆ.ಸು. ಇಲಾಖೆಗೆ ಕಳುಹಿಸಲಾಗಿದೆ.

ಉ) ಈಗಿನ ನಿರ್ದೇಶಕರು ಹಾಗೂ ಇನ್ನಿಬ್ಬರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಪ್ರಸ್ತಾವನೆಯನ್ನು ದಿನಾಂಕ 27.11.2002ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಕಳುಹಿಸಿದ್ದು ಅದು ಅವರಲ್ಲಿ ಪರಿಶೀಲನೆಯಲ್ಲಿದೆ.

ರಾಜ್ಯದ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ನಡೆದ ಅವ್ಯವಹಾರ

2019(2541) ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅವ್ಯವಹಾರದ ಬಗ್ಗೆ ಸಿ.ಒ.ಡಿ. ಯವರು ತನಿಖೆ ನಡೆಸಿ 1998 ರಲ್ಲಿ ತನಿಖಾ ವರದಿ ಸರ್ಕಾರಕ್ಕೆ ಸಲ್ಲಿಸಿರುವುದು ನಿಜವೇ;

ಆ) ಸದರಿ ತನಿಖಾ ವರದಿಯಲ್ಲಿ ಬೆಂಗಳೂರಿನಲ್ಲಿರುವ 5 ವಲಯಗಳ ಅಧಿಕಾರಿಗಳ ಶ್ರೀ ಪುಟ್ಟಸ್ವಾಮಿಗೌಡ, ಅಶೋಕ ಪೀಠೋಪಕರಣಗಳ ವ್ಯಾಪಾರಿ, ಬೆಂಗಳೂರು ಇವರೊಬ್ಬರಿಂದಲೇ ಸುಮಾರು 50 ಲಕ್ಷ ರೂಪಾಯಿಗಳ ಪೀಠೋಪಕರಣ ಖರೀದಿಸುತ್ತಿದ್ದಾರೆಂದು ಹೇಳಿರುವುದು ನಿಜವೇ;

ಇ) ಸದರಿ 5 ವಲಯದ ಅಧಿಕಾರಿಗಳು ಮೆ:ಜಗದೀಶ್ ಬೈಡಿಂಗ್ ವರ್ಕ್ಸ್, ನಂ. 586, 4ನೇ ಮುಖ್ಯ ರಸ್ತೆ, 40ನೇ 'ಡಿ' ಆಡ್ಡರಸ್ತೆ, 2ನೇ ಹಂತ, ಮಹಾಲಕ್ಷ್ಮೀಪುರಂ, ಬೆಂಗಳೂರು-86, ಇವರಿಂದಲೇ ಪುಸ್ತಕಗಳನ್ನು ಬೈಡಿಂಗ್ ಮಾಡಿಸಿ ಪ್ರತಿ ವರ್ಷ 30 ಲಕ್ಷ ರೂಪಾಯಿಗಳನ್ನು ಪಾವತಿ ಮಾಡುತ್ತಿದ್ದಾರೆಂದು ಸದರಿ ತನಿಖಾ ವರದಿಯಲ್ಲಿ ಆರೋಪಿಸಿರುವುದು ನಿಜವಲ್ಲವೇ;

ಈ) ಹಾಗಿದ್ದಲ್ಲಿ ಸದರಿ ಅಧಿಕಾರಿಗಳು ಶೇ. 30 ರಿಂದ 40 ರಷ್ಟು ಹಣ ಲಂಚದ ರೂಪದಲ್ಲಿ ಪಡೆದಿದ್ದಾರೆ ಎಂದು ಆರೋಪಿಸಿರುವುದು ನಿಜವೇ;

ಉ) ಹಾಲಿ ಗ್ರಂಥಾಲಯ ನಿರ್ದೇಶಕರು 14.10.93 ರಂದು ಬೆಂಗಳೂರಿನ 5 ವಲಯಗಳ ಮುಖ್ಯ ಗ್ರಂಥಾಲಯದ ಅಧಿಕಾರಿಗಳಿಗೆ ಪತ್ರ ಬರೆದು ಮೆ: ಜಗದೀಶ್ ಬೈಡಿಂಗ್ ವರ್ಕ್ಸ್, ಬೆಂಗಳೂರು, ಇವರಿಗೆ ಪುಸ್ತಕಗಳ ಬೈಡಿಂಗ್ ಕೆಲಸವನ್ನು ವಹಿಸಿಕೊಡಲು ಸೂಚಿಸಿರುವುದು ನಿಜವಲ್ಲವೇ?

ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ಹೌದು

ಆ) ಸಿ.ಒ.ಡಿ. ತನಿಖಾ ವರದಿಯು ಬೆಂಗಳೂರಿನ ಪ್ರತಿಯೊಂದು ಗ್ರಂಥಾಲಯ ವಲಯವು 5 ರಿಂದ 6 ಲಕ್ಷ ರೂಪಾಯಿಗಳ ಪೀಠೋಪಕರಣಗಳನ್ನು ಖರೀದಿಸಿತ್ತದೆಂದು ವರದಿ ಮಾಡಿದೆ. ತನಿಖಾ ವರದಿಯು ಪೀಠೋಪಕರಣಗಳನ್ನು ವೃತ್ತ ಪತ್ರಿಕೆಗಳಲ್ಲಿ ಟೆಂಡರ್ ಕರೆದು ಖರೀದಿಸುತ್ತಿರಲಿಲ್ಲವೆಂದು ಅಭಿಪ್ರಾಯ ಪಟ್ಟಿದೆ.

ಇ) ಇಲ್ಲ

ಈ) ಆರೋಪಿಸಿರುವುದು ನಿಜ

ಉ) ಹೌದು

ರಾಜ್ಯದಲ್ಲಿ ಏಡ್ಸ್ ರೋಗಿಗಳು

2020(2039) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ, (ಕುಂದಾಪುರ) : ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸಮೀಕ್ಷೆ ಪ್ರಕಾರ ಎಷ್ಟು ಏಡ್ಸ್ ರೋಗಿಗಳನ್ನು ಗುರುತಿಸಲಾಗಿದೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

ಆ) ಸದರಿ ರೋಗವನ್ನು ನಿಯಂತ್ರಿಸುವಲ್ಲಿ ಸರಕಾರ ಕೈಗೊಂಡ ಕ್ರಮವೇನು;